ಶ್ರೀ ಟಿ.ಬಿ. ಜಯಚಂದ್ರ: ನಿಮ್ಮ ದೃಷಿ ರೈತರ ಮೇಲಿರಲಿ. ಗುತ್ತಿಗೆದಾರರ ಮೇಲೆ ಇರಬಾರದು.

ಶ್ರೀ ಬಸವರಾಜ್ ಬೊಮ್ಮಾಯಿ: ಈ ಸರ್ಕಾರದ ದೃಷ್ಟಿ ರೈತರ ಮೇಲೆ ಇರುವುದರಿಂದಲೇ ಈ ಕಾಮಗಾರಿಗಳನ್ನು ತೆಗೆದುಕೊಂಡಿರುವುದು. ಹಿಂದೆ ಮಹಾರಾಜರ ಕಾಲದ್ದನ್ನು ಏಕೆ ಮುಟ್ಟಲಿಲ್ಲ? ರೈತರ ರಕ್ಷಣೆ ಮಾಡುವ ಸಲುವಾಗಿಯೇ ನಾವು ಇವತ್ತು ಇದನ್ನು ಮಾಡುತ್ತಿರುವುದು. ಇದನ್ನು ಮಾಡುತ್ತಿರುವ ಸಂದರ್ಭದಲ್ಲಿ ಯಾವುದೇ ರೀತಿಯ cost escalation ಆಗಿಲ್ಲ. ಇದನ್ನು ಸರ್ಕಾರ ಸಹಿಸುವುದಿಲ್ಲ. ಆ ಎಲ್ಲಾ ಮಾಹಿತಿಗಳನ್ನು ನಿಮ್ಮ ಮುಂದೆ ಇಡಲು ತಯಾರಿದ್ದೇನೆ. ಅನಂತರ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದಕ್ಕೆ ನಾನು ಬದ್ಧನಾಗಿರುತ್ತೇನೆ.

3) ವಿಷಯ:–ಜಿಗಣಿ ಪ್ರದೇಶವು ಹೆಚ್ಚಾಗಿ ಕೈಗಾರಿಕಾ ಪ್ರದೇಶವಾಗಿದ್ದು ಪ್ರತಿಷ್ಠಿತ ಕಂಪನಿಗಳನ್ನು ಹೊಂದಿದ್ದು ಈ ಪ್ರದೇಶವು ಬನ್ನೇರುಘಟ್ಟ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರಲಿದ್ದು ಈ ಪ್ರದೇಶಕ್ಕೆ ಪ್ರತ್ಯೇಕ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಎಂ. ಕೃಷ್ಣಪ್ಪ: ಜಿಗಣಿ ಪ್ರದೇಶವು ಹೆಚ್ಚಾಗಿ ಕೈಗಾರಿಕಾ ಪ್ರದೇಶವಾಗಿದ್ದು ಪ್ರತಿಷ್ಠಿತ ಕಂಪನಿಗಳನ್ನು ಹೊಂದಿದ್ದು ಈ ಪ್ರದೇಶವು ಬನ್ನೇರುಘಟ್ಟ ಪೊಲೀಸ್‌ಠಾಣೆ ವ್ಯಾಪ್ತಿಯಲ್ಲಿ ಬರಲಿದ್ದು ಈ ಪ್ರದೇಶಕ್ಕೆ ಪ್ರತ್ಯೇಕ ಪೊಲೀಸ್ ಠಾಣೆಯನ್ನು ಮಂಜೂರು ಮಾಡಬೇಕೆಂದು ಗೃಹ ಮತ್ತು ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 207 ಪಿಓಪಿ 2008, ದಿನಾಂಕ 10–2–2010ರಲ್ಲಿ 2010–11ನೇ ಸಾಲಿನಲ್ಲಿ ಹೊಸ 7 ಪೊಲೀಸ್ ಠಾಣೆಗಳು, 8 ಸಂಚಾರಿ ಪೊಲೀಸ್ ಠಾಣೆಗಳು ಹಾಗೂ 10 ಪೊಲೀಸ್ ಉಪ ಠಾಣೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಈ ಒಟ್ಟು 25 ಪೊಲೀಸ್ ಠಾಣೆಗಳಿಗೆ ತಗಲುವ ಆವರ್ತಕ ವೆಚ್ಚವು ರೂ. 16,49,49,128/– ಆಗಿರುತ್ತದೆ. ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 331 ಪಿಓಪಿ 2009, ದಿನಾಂ 11–2–2010ರಲ್ಲಿ ಶಿವಮೊಗ್ಗ

ಜಿಲ್ಲೆ, ತೀರ್ಥಹಳ್ಳಿಯಲ್ಲಿ ಪೊಲೀಸ್ ಉಪವಿಭಾಗವನ್ನು ಸಹ ತೆರೆಯಲಾಗಿದೆ. ಇದಕ್ಕಾಗಿ ತಗಲುವ ಆವರ್ತಕ ವೆಚ್ಚವು ರೂ. 13,03,956/– ಆಗಿರುತ್ತದೆ. ಈ ಪೊಲೀಸ್ ಠಾಣೆಗಳನ್ನು 2010–11ನೇ ಸಾಲಿನಿಂದ ಕಾರ್ಯಗತಗೊಳಿಸಲು ಮಂಜೂರಾತಿ ನೀಡಿದ್ದು, 25 ಪೊಲೀಸ್ ಠಾಣೆಗಳ ಮತ್ತು ಉಪವಿಭಾಗದ ಒಟ್ಟು ಆವರ್ತಕ ವೆಚ್ಚವು ರೂ. 16,62,53,084/– ಗಳಾಗುತ್ತವೆ. 2010–11ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "2055–00–800–0–01 ಹೊಸ ಆರಕ್ಷಕ ಠಾಣೆಗಳನ್ನು ತೆರೆಯುವುದು" ಇದರಡಿಯಲ್ಲಿ ರೂ. 406.69 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದೆ. 2010–11ನೇ ಸಾಲಿನಲ್ಲಿ ಮಂಜೂರಾತಿ ನೀಡಿದ ಪೊಲೀಸ್ ಠಾಣೆಗಳ ಆವರ್ತಕ ವೆಚ್ಚವನ್ನು ಭರಿಸಲು ಸದರಿ ಸಾಲಿನಲ್ಲಿ ಕಲ್ಪಿಸಿರುವ ಅನುದಾನವು ಕಡಿಮೆ ಆಗಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈಗಾಗಲೇ ಮಂಜೂರಾತಿ ನೀಡಿದ 25 ಪೊಲೀಸ್ ಠಾಣೆಗಳು ಮತ್ತು ಒಂದು ಉಪ ವಿಭಾಗವು ಪೂರ್ಣವಾಗಿ ಕಾರ್ಯಾರಂಭಗೊಳ್ಳಲು ಕೊರತೆ ಬೀಳುವ ಅನುದಾನವನ್ನು ಸರಿದೂಗಿಸಿ ಅವುಗಳು ಕಾರ್ಯಾರಂಭ ಮಾಡಿದ ನಂತರ ಜಿಗಣಿ ಪ್ರದೇಶಕ್ಕೆ ಪ್ರತ್ಯೇಕ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಬಗ್ಗೆ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಶ್ರೀ ಎಂ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಜಿಗಣಿ ಕೈಗಾರಿಕಾ ಪ್ರದೇಶ ಬಹಳ ದೊಡ್ಡದಾಗಿದೆ ಮತ್ತು ಗ್ರಾನೈಟ್ ಕಟ್ಟಿಂಗ್ಸ್ ಮತ್ತು ಗ್ರಾನೈಟ್ ಸೇಲ್ಸ್ ಭಾನುವಾರದ ದಿವಸ ಹೆಚ್ಚು ಆಗುತ್ತಿದ್ದು ಹೆಚ್ಚು ಸಾರ್ವಜನಿಕರು ಈ ಪ್ರದೇಶಕ್ಕೆ ಬರುತ್ತಿದ್ದಾರೆ. ರಾಷ್ಟ್ರೀಯ ಉದ್ಯಾನವನಕ್ಕೆ ಪ್ರತಿ ದಿನ ಎರಡು ಸಾವಿರ ಸಾರ್ವಜನಿಕರು ಭೇಟಿ ಕೊಟ್ಟು ವೀಕ್ಷಿಸಿ ಹೋಗುತ್ತಿದ್ದಾರೆ. ಭಾನುವಾರದ ದಿವಸವಾದರೆ ಸುಮಾರು ಐದು ಸಾವಿರ ಸಾರ್ವಜನಿಕರು ಭೇಟಿ ಕೊಡುತ್ತಾರೆ. ಈಗಿರತಕ್ಕಂಥ ಪೊಲೀಸ್ ಠಾಣೆಯಲ್ಲಿ ಕೇವಲ 31 ಮಂದಿ ಪೊಲೀಸ್‌ಗಳಿದ್ದಾರೆ. ಆದರೆ ಸೆಂಟ್ರಿ ಡ್ಯೂಟಿ ಎಂದು ಮೂವರು ಪೊಲೀಸರು ಹೋಗುತ್ತಾರೆ. ಕೋರ್ಟ್‌ಗೆ ಎಂದು ಇಬ್ಬರು ಹೋಗುತ್ತಾರೆ. ಆದಕಾರಣ ಈಗ ಅಲ್ಲಿರುವಂಥ

ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸಬೇಕೆಂದು ನಾನು ಗೃಹ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ. ಕೃಷ್ಣಪ್ಪನವರು ಹೇಳಿದಂತೆ ಬನ್ನೇರುಘಟ್ಟ ಬಹಳ ಪ್ರಮುಖವಾದ ಸ್ಥಳವಾಗಿದೆ. ನಮಗೆ ಅಲ್ಲಿ ಪೊಲೀಸ್ ಠಾಣೆಗೆ ಮಂಜೂರಾತಿ ಕೊಡಬೇಕೆನ್ನುವ ಮನಸ್ಸು ಇದ್ದರೂ ಕೂಡ, ಈಗಾಗಲೇ 25 ಪೊಲೀಸ್ ಠಾಣೆಗಳಿಗೆ ಈ ವರ್ಷ ನಮಗೆ ಅನುದಾನವನ್ನು ಕೊಟ್ಟಿದ್ದಾರೆ. ಆ 25 ಪೊಲೀಸ್ ಠಾಣೆಗಳ ಅನುದಾನವನ್ನು ನಾವು ಬಳಸಿಕೊಂಡು ಆ ಸ್ಟೇಶನ್‌ಗಳ ನಿರ್ಮಾಣವನ್ನು ಮಾಡುತ್ತಿದೇವೆ. ಅದು ಆದ ತಕ್ಷಣ first priority ನಲ್ಲಿ ಬನ್ನೇರುಘಟ್ಟ ಭಾಗಕ್ಕೆ ಪೊಲೀಸ್ ಸ್ಟೇಶನ್ ಕೊಡುವಂಥದ್ದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಕೊಟ್ಟಿದ್ದ ಡಾ:ಹೇಮಚಂದ್ರಸಾಗರ್‌ರವರು ಈಗ ಸದನದಲ್ಲಿ ಇಲ್ಲ. ಇನ್ನು ಎನ್. ಸಂಪಂಗಿಯವರ ಗಮನ ಸೆಳೆಯುವ ಸೂಚನೆಗೆ ಸೋಮವಾರ ಸಚಿವರು ಹೇಳಿಕೆಯನ್ನು ಕೊಡುತ್ತಾರೆ. ಇನ್ನು ಗಮನ ಸೆಳೆಯುವ ಸೂಚನೆ ಕಳುಹಿಸಿದ್ದ ಮಾನ್ಯ ಅಶೋಕ್ ಎಂ. ಪಟ್ಟಣ್‌ರವರು ಈಗ ಸದನದಲ್ಲಿ ಇಲ್ಲ. ಆದಕಾರಣ ಈಗ ಮಾನ್ಯ ಜೆ.ಡಿ. ನಾಯ್ಕ್‌ರವರು ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಮಂತ್ರಿಗಳಿಗೆ ಹೇಳಬೇಕು.

4. ವಿಷಯ:–ಉಡುಪಿ, ಕುಂದಾಪುರಗಳಿಂದ ಭಟ್ಕಳ ತಾಲ್ಲೂಕಿಗೆ ಪರವಾನಿಗೆ ಇಲ್ಲದೆ ಖಾಸಗಿ ಕಂಪನಿಗಳ ವಾಹನಗಳು ಓಡಾಡುತ್ತಿರುವುದರಿಂದ KSRTCಗೆ ನಷ್ಟವಾಗುತ್ತಿರುವ ಬಗ್ಗೆ.

ಶ್ರೀ ಜೆ.ಡಿ. ನಾಯ್ಕ್: ಮಾನ್ಯ ಅಧ್ಯಕ್ಷರೆ,: ಉಡುಪಿ, ಕುಂದಾಪುರಗಳಿಂದ ಭಟ್ಕಳ ತಾಲ್ಲೂಕಿಗೆ ಪರವಾನಿಗೆ ಇಲ್ಲದೆ ಖಾಸಗಿ ಕಂಪನಿಗಳ ವಾಹನಗಳು ಓಡಾಡುತ್ತಿರುವುದರಿಂದ KSRTCಗೆ ನಷ್ಟ ವಾಗುತ್ತಿರುವ ಬಗ್ಗೆ ಮಾನ್ಯ ಗೃಹ ಮತ್ತು ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಂಗಳೂರು, ಉಡುಪಿ, ಕುಂದಾಪುರಗಳಿಂದ ಭಟ್ಕಳ ತಾಲ್ಲೂಕಿಗೆ ಸಾರಿಗೆ